ಸೈನ್ ಮಾಡಿ ಹೋಗಬೇಕಾಗುತ್ತೆ. ಅಲ್ಲದೆ ನಿಮ್ಮ ಜೊತೆ ಕೆಲಸ ಮಾಡುತ್ತಿದ್ದ ಆ ಐದು ಜನರಿಗೂ ಹೇಳಿ' ಎಂದರು. ಮೀಡಿಯಾದವರು ಡಿ.ಸಿ. ಮತ್ತು ಎಸ್.ಪಿ.ಯವರಿಗೆ 'ಸಾರ್ ಈಗ ಇದನ್ನು ಏನ್ಮಾಡ್ತೀರಾ? ಸೆಂಟ್ರಲ್‌ಗೆ ಕಳುಹಿಸುತ್ತೀರೋ ಅಥವಾ ರಾಜ್ಯ ಸರ್ಕಾರಕ್ಕೋ? ಆಮೇಲೆ ಕಿವಿಯ ಬಗ್ಗೆ ಯಾರ ಮೇಲಾದ್ರೂ ಅನುಮಾನವಿದೆಯಾ?' ಎಂದು ಕೇಳಿದರು. ಅದಕ್ಕೆ ಪ್ರತಿಕ್ರಿಯಿಸುತ್ತಾ ಡಿ.ಸಿ. 'ಒಂದು ಎನ್‌ಕ್ವೆಯರಿ ಕಮಿಟಿ ಮಾಡಿ ಶೀಘ್ರದಲ್ಲಿಯೇ ಪತ್ತೆ ಹಚ್ಚುತ್ತೇವೆ. ಆಮೇಲೆ ಇದು ಎಲ್ಲಿಗೆ ಸೇರಬೇಕು ಎನ್ನುವುದನ್ನು ಸರ್ಕಾರ ನಿರ್ಧಾರ ಮಾಡುತ್ತೆ' ಎಂದರು. 'ಸಾರ್ ಸಾರ್ ಕೊನೆಯ ಪ್ರಶ್ನೆ ಇದು ಯಾವ ಕಾಲಕ್ಕೆ ಸೇರಿದ್ದು ಅಂಥ ಏನಾದರೂ ಮಾಹಿತಿ ಸಿಕ್ಕಿತಾ? ಮತ್ತು ಅದರ ಒಳಗಡೆ ವಜ್ರ ಇದೆಯಂತೆ. ಹೌದಾ?' ಎಂದು ಕೇಳಿದರು. 'ಇಲ್ಲಾ ಈಗಲೇ ಏನು ಹೇಳುವುದಕ್ಕೆ ಆಗುವುದಿಲ್ಲ. ಶೀಘ್ರದಲ್ಲಿಯೇ ಎಲ್ಲಾ ಮಾಹಿತಿಯನ್ನು ಕೊಡಲಾಗುವುದು' ಎಂದು ಹೇಳಿ ಕಾರುಗಳನ್ನು ಹತ್ತಿಕೊಂಡು ಹೋದರು. ಅವರ ಹಿಂದೆ ಜೀಪು ಮತ್ತು ವ್ಯಾನುಗಳು ಹೋದವು.

* * *

ಐವತ್ತು- ಐವತ್ತೈದು ಕೆ.ಜಿ. ಇದೆಯೆಂದು ಹೇಳಲಾಗಿದ್ದ ಅದು ತೂಕ ಮಾಡಿದಾಗ ಬರೋಬ್ಬರಿ ನೂರಾಅರವತ್ತೈದು ಕೆ.ಜಿ. ತೂಗಿತ್ತು. ಆ ಲೋಹದ ಪ್ರಾಣಿಯೊಳಗೆ ವಜ್ರದ ಹರಳುಗಳನ್ನು ಅಡಗಿಸಿಡಲಾಗಿದೆ ಎನ್ನುವ ಗುಮಾನಿ ಹಬ್ಬಿ ಎಲ್ಲರ ಮನೆಮಾತಾಗಿ ನಮಗೆ ಸಿಕ್ಕಿದ್ದರೆ ಯಾರ ಕಣ್ಣಿಗೆ ಬೀಳಿಸದ ಹಾಗೆ ಅದನ್ನು ಮಾರಿ ಶ್ರೀಮಂತರಾಗಬಹುದಾಗಿದ್ದ ಕನಸುಗಳನ್ನು ಕಾಣುತ್ತ ಸಣ್ಣ ಶಿವನಂಜಯ್ಯನನ್ನು ಮತ್ತು ಪೆನ್ನೇಶಿ ಹಾಗೂ ಪೆದ್ದೇಶಿಯರನ್ನು ದಡ್ಡ ಶಿಖಾಮಣಿಗಳು ಎಂದೆಲ್ಲಾ ಬೈಯ್ದುಕೊಂಡರು. ಇದೆಲ್ಲಾ ಆಗಿ ಒಂದು ವಾರ ಕಳೆದ ನಂತರ ಟಿ.ವಿ.ಯಲ್ಲಿ 'ಆರ್ಥಿಕ ತಜ್ಞರೊಬ್ಬರು ಒಂದು ಪಕ್ಷ ಅದರೊಳಗಡೆ ಬರೀ ವಜ್ರಗಳೇ ತುಂಬಿ ಹೋಗಿದ್ದರೆ ಅದರಿಂದ ದೇಶದ ಅರ್ಧ ಸಾಲವನ್ನು ತೀರಿಸಬಹುದೆಂದು' ಅಭಿಪ್ರಾಯಪಟ್ಟು ಅದು ದಿನ ಪತ್ರಿಕೆಯಲ್ಲಿ ಮುಖಪುಟ ಸುದ್ದಿಯಾಗಿ ಹೊಮ್ಮಿತು.

* * *

ಇದೆಲ್ಲಾ ಆಗಿ ನಾಲ್ಕೈದು ವಾರಗಳು ಕಳೆದಿದ್ದವಷ್ಟೆ. ಶಾಸ್ತ್ರಿ ಗುಂಡೇಶಪ್ಪ. ಎದೆನೋವಿನಿಂದ ಸತ್ತು ಹೋದ. ಅವನ ಮನೆಯವರು 'ಶಿವನಂಜಯ್ಯನ ಆಲದ ಮರ ಅವನನ್ನು ಸಾಯಿಸಿತು ಎಂದು ಗೋಳಾಡಿದರು. ಎಂದೆಂದೂ ಆಸ್ಪತ್ರೆಯ ಮುಖ ನೋಡಿರದಿದ್ದ ಅವನ ಸಾವಿಗೆ ಒಂದು ಲೋಹದ ಪ್ರಾಣಿ ಕಾರಣವಾಯಿತೆಂದು ಸಿಟ್ಟಾಗಿ; ಬಂಗಾರ ಸಿಗಬಾರದಂತೆ. ಸಿಕ್ಕರೆ ಅನಿಷ್ಟ ಕಟ್ಟಿಟ್ಟ ಬುತ್ತಿ ಎಂದು ಅವರ ಮನೆಯವರು ಶಪಿಸಿಕೊಂಡು ಓಡಾಡ ತೊಡಗಿದರು. ಆ ಊರಿನ ಕೆಲವರು 'ಮತ್ತಿನ್ನೇನು? ಅವನು ಕಲಿತ ವಿದ್ಯೆ ಅವನನ್ನೇ ನುಂಗಿತು ನೋಡಿ. ಅಷ್ಟು ವರ್ಷಗಳ ಕಾಲ ಇದ್ದಂತ ಆಲದ ಮರವನ್ನು ಕಡಿಸುವುದಕ್ಕೇ ಯಾಕೆ ಹೇಳಬೇಕಿತ್ತು. ಇನ್ನೂ ಏನೇನು ಕಾದಿದೆಯೋ! ಶಿವನೇ! ಇನ್ನು ಏನೆಲ್ಲಾ ದುರಂತಗಳು ಬಂದು ಎರಗಲಿವೆಯೋ!' ಎಂದು ಮಾತಾಡಕೊಳ್ಳತೊಗಿದರು.

* * *

ಈ ಘಟನೆ ಕಾಲದಲ್ಲಿ ಮಾಸಿ ಹೋಗುತ್ತಿರುವಾಗ ಆ ಊರಿಗೆ ವಿಜ್ಞಾನಿಗಳು ಪ್ರವಾಸಿಗರು, ಇತಿಹಾಸಕಾರರು ಭೇಟಿ ಮಾಡುವುದು ದಿನೇದಿನೇ ಹೆಚ್ಚಾಗತೊಡಗಿತು. ವಿಜ್ಞಾನಿಗಳು ಆ ಊರಿನ ಸುತ್ತ ಮುತ್ತಲಿನ ಹೊಲಗಳ ಮಣ್ಣು ಪರೀಕ್ಷೆ ಮಾಡಿ, 'ಈ ನೆಲದಲ್ಲಿ ಖನಿಜ ನಿಕ್ಷೇಪಗಳಿದ್ದು, ಮ್ಯಾಂಗನೀಸ್, ಬಾಕ್ಸೈಟ್, ಅಲ್ಯೂಮಿನಿಯಂನಂಥ ಮತ್ತಿತರೆ ಬೆಲೆ ಬಾಳುವ ಖನಿಜವಿರುವ ಸಾಧ್ಯತೆ ಇದೆ. ಗುಡ್ಡದ ಸುತ್ತ ಮುತ್ತ ಇತಿಹಾಸಕಾರರು ಉತ್ಖನನ ಮಾಡುವಾಗ ಕೆಲವು ವಜ್ರದ ಹರಳುಗಳು ಸಿಕ್ಕು ಆ ಊರಿನ ಇಂಚಿಂಚು ಜಾಗಕ್ಕೂ ಲಕ್ಷಗಟ್ಟಲೆ ಕೋಟಿಗಟ್ಟಲೆ ಬೆಲೆ ನಿಗದಿಯಾಗತೊಡಗಿತು. ಹೊಸಮನೆಯ ಶಿವಪ್ಪ ನಾಯಕ ತನ್ನ ಇಪ್ಪತ್ತೈದು ಎಕರೆ ಭತ್ತದ ತೆನೆಗಳಿಂದ ತುಂಬಿರುವ ಗದ್ದೆಯನ್ನು ಐದು ಕೋಟಿ ರೂಪಾಯಿಗೆ ಮಾರಿದರು. ಜೊತೆಗೆ ತಮ್ಮ ನೂರು ವರ್ಷದ ಬೇವಿನ ಮುಟ್ಟಿನಿಂದ ಕಟ್ಟಲಾಗಿದ್ದ ಮನೆಯನ್ನೂ ಮಾರಿ, ಬಂದ ದುಡ್ಡನ್ನು ತೆಗೆದುಕೊಂಡು ಹೋಗಿ ನಗರದಲ್ಲಿ ನೆಲೆಸಿದರು. ಶಿವಶಂಕರೇ ಗೌಡರೂ ಸಹ ತಮ್ಮ ನೂರು ಎಕರೆ ಹೊಲವನ್ನು ಮಾರಿದರು. ಮೊದಮೊದಲು ಪ್ರಗತಿ ಮೈನಿಂಗ್ ಅಂಡ್ ಡೆವಲಪರ್ಸ್ ಮತ್ತು